ಕೊಡುವುದಿಲ್ಲ. ಈ ಕಡೆ ಅವರು ಕೇರಳದವರು ಎಂದು ಕರ್ನಾಟಕದಲ್ಲಿ ಅವರಿಗೆ ಕೆಲಸ ಕೊಡುವುದಿಲ್ಲ. ನಮ್ಮ ಮಕ್ಕಳು ನಮ್ಮ ಸಂಬಂಧಿಗಳು 4ನೇ ತರಗತಿಯವರೆಗೂ ಅಲ್ಲಿ ಮಲೆಯಾಳಿ ಕಲಿಯುತ್ತಿದ್ದಾರೆ. ಕನ್ನಡಿಗರಿಗೆ ಏನೂ ಭದ್ರತೆ ಇಲ್ಲ, ಮೀಸಲಾತಿ ಇಲ್ಲ, ಕರ್ನಾಟಕ ವಿಶಾಲ ಎಂದು ಹೇಳುತ್ತೀರಿ. ಕನ್ನಡ ಸಮ್ಮೇಳನಕ್ಕೆ ಕಾಸರಗೋಡಿನವರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಿ, ಈ ರೀತಿ ಕಣ್ಣು ಹೊರೆಸುವ ತಂತ್ರಬೇಡ. ವ್ಯವಹಾರಿಕವಾಗಿ ತಾವು ಏನು ಮಾಡುತ್ತೀರಿ ಅದನ್ನು ಹೇಳಿ. ಕನ್ನಡಿಗರನ್ನು ಬದುಕುವುದಕ್ಕೆ ಬಿಡಿ, ಕನ್ನಡ ಬದುಕುವುದಕ್ಕೆ ಬಿಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕನ್ನಡ ಬದುಕುವುದಕ್ಕೋಸ್ಕರವೇ ಕನ್ನಡ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತಿರುವುದು. ಇಂಗ್ಲೀಷ್‌ನವರನ್ನು ಮಾಡುತ್ತಿಲ್ಲ ಕನ್ನಡದವರನ್ನೇ ನೇಮಕ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಗಡಿನಾಡ ಕನ್ನಡಿಗರು ನಾಶವಾಗುತ್ತಿದ್ದಾರೆ. ಇದು ಬಹಳ ಶೋಚನೀಯವಾದ ಸಂಗತಿ. ಇದರ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕು.

ಅಧ್ಯಕ್ಷರು: ಅವರ ಸಲಹೆಯನ್ನು ತೀವ್ರವಾಗಿ ಪರಿಶೀಲಿಸುತ್ತೇನೆಂದು ಹೇಳಿ.

ಶ್ರೀ ಎಚ್.ಜಿ.ಗೋವಿಂದೇಗೌಡ: ಪರಿಶೀಲಿಸುತ್ತೇವೆ.

ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ನೀಡಲಾದ ವಿದ್ಯಾರ್ಥಿಗಳ ಸಂಖ್ಯೆ

29 (9)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1997-98ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ನೀಡಲಾದ ಪ್ರವೇಶಗಳೆಷ್ಟು?

2) ಸಿ.ಇ.ಟಿ. ನಂತರ ಉಚಿತ ಪ್ರವೇಶ ಪಡೆದ ವೈದ್ಯಕೀಯ ವಿದ್ಯಾರ್ಥಿಗಳ ಜಿಲ್ಲಾವಾರು ವಿವರ ನೀಡುವುದು.

3) ವೃತ್ತಿಪರ ಶಿಕ್ಷಣ ಪ್ರವೇಶ ನೀಡುವಲ್ಲಿ ಆಗುತ್ತಿರುವ ಪ್ರಾದೇಶಿಕ ತಾರತಮ್ಯ ನಿವಾರಿಸಲು ಕಂದಾಯ ವಿಭಾಗವಾರು ಇಲ್ಲವೇ, ವಿಶ್ವ ವಿದ್ಯಾನಿಲಯವಾರು ಪ್ರವೇಶ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ॥ ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

1) 1997-98ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ 1763 ಪ್ರವೇಶಗಳನ್ನು ನೀಡಲಾಗಿದೆ.

2) ಜಿಲ್ಲಾವಾರು ಉಚಿತ ಪ್ರವೇಶ ಪಡೆದ ಅಭ್ಯರ್ಥಿಗಳ ಅಂಕಿ-ಅಂಶಗಳು ಈ ಕೆಳಗಿನಂತಿವೆ.

ಕ್ರ.ಸಂ	ಜಿಲ್ಲೆಯ ಹೆಸರು	ವಿದ್ಯಾರ್ಥಿಗಳ ಸಂಖ್ಯೆ
1)	ಬೆಂಗಳೂರು ನಗರ	331
2)	ಬೆಂಗಳೂರು ಗ್ರಾಮಾಂತರ	32
3)	ಬೆಳಗಾಂ	43
4)	ಬಳ್ಳಾರಿ	46
5)	ಬೀದರ್	16
6)	ಬಿಜಾಪುರ	60
7)	ಚಿಕ್ಕಮಗಳೂರು	22
8)	ಚಿತ್ರದುರ್ಗ	65
9)	ದಕ್ಷಿಣ ಕನ್ನಡ	92
10)	ಧಾರವಾಡ	58
11)	ಗುಲ್ಬರ್ಗ	58
12)	ಹಾಸನ	29
13)	ಕೊಡಗು	09
14)	ಕೋಲಾರ	80
15)	ಮಂಡ್ಯ	27

16)	ಮೈಸೂರು	61
17)	ರಾಯಚೂರು	22
18)	ಶಿವಮೊಗ್ಗ	46
19)	ತುಮಕೂರು	59
20)	ಉತ್ತರ ಕನ್ನಡ	24

3) ಶೇಕಡ 30ರಷ್ಟು ಉಚಿತ ಪ್ರವೇಶದ ಮೀಸಲಾತಿಯನ್ನು ವಿಶ್ವವಿದ್ಯಾಲಯವಾರು ನಿಗದಿಪಡಿಸಿ, ಪ್ರವೇಶ ಪ್ರಕ್ರಿಯೆಯ ವೇಳೆಯಲ್ಲಿ ಈ ಮೀಸಲಾತಿ ಬಗ್ಗೆ ಗಮನ ಹರಿಸಿ ಸದರಿ ಮೀಸಲಾತಿಯಂತೆ ಪ್ರವೇಶ ಪ್ರಕ್ರಿಯೆ ನಡೆಸಲಾಗುತ್ತಿದೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಕಳೆದ ಎರಡು ವರ್ಷಗಳಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ರಾಜ್ಯದಲ್ಲಿ ವೈದ್ಯಕೀಯ ಸೀಟುಗಳನ್ನು ಪಡೆಯುತ್ತಿರುವುದರಲ್ಲಿ ಜಿಲ್ಲಾವಾರು ನೋಡಿದರೆ ತಾರತಮ್ಯವಾಗುತ್ತಿದೆ. ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ಎರಡು ವರ್ಷಗಳು ಆಯಿತು. ಪುನಃ ಈ ವರ್ಷ ತಾವು ನೋಡಿ, ಬೆಂಗಳೂರು ನಗರದಲ್ಲಿ 331 ಜನ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ, ಕೋಲಾರ ಜಿಲ್ಲೆ 80 ಜನ ವಿದ್ಯಾರ್ಥಿಗಳು ಪ್ರವೇಶಾವಕಾಶ ಪಡೆದಿದ್ದಾರೆ. ನಮ್ಮ ಧಾರವಾಡ ಜಿಲ್ಲೆ 58 ಸೀಟುಗಳನ್ನು ಪಡೆದುಕೊಂಡಿದೆ. ರಾಯಚೂರು ಜಿಲ್ಲೆಯವರು 22 ಸೀಟುಗಳು ಪಡೆದುಕೊಂಡಿದ್ದಾರೆ. ಈ ರೀತಿ ತಾರತಮ್ಯ ಪ್ರತಿ ವರ್ಷ ನಡೆದುಕೊಂಡು ಬರುತ್ತಿದೆ. ಇನ್ನೂ ನಾವು ಎಷ್ಟು ವರ್ಷ ಎಂದು ಈ ರೀತಿ ಸುಮ್ಮನೇ ಕುಳಿತುಕೊಳ್ಳುವುದು. ದಯಮಾಡಿ ಮಾನ್ಯ ಮಂತ್ರಿಗಳು ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಏನು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ? ಕಳೆದ ವರ್ಷ ತಾವು ಈ ಸದನದಲ್ಲಿ ಕೊಟ್ಟ ಭರವಸೆಯನ್ನು ಈಡೇರಿಸುವುದಕ್ಕೆ ಕಾನೂನಿನಲ್ಲಿ ತಿದ್ದುಪಡಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆಯೇ?

ಡಾ॥ ಎಂ.ಶಂಕರ್‌ನಾಯಕ್: ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಈ ಸದನದಲ್ಲಿ ಈ ವಿಷಯ ಚರ್ಚೆಯಾದಾಗ ಬೇರೆ ರಾಜ್ಯಗಳಲ್ಲಿ ಯಾವ ರೀತಿ ಇದೆ ಅದಕ್ಕೆ ಅನುಗುಣವಾಗಿ ಮಾಡುತ್ತೇವೆಂದು ಹೇಳಿದ್ದೆವು. ಅದೇ ರೀತಿ ನಾವು ಮಹಾರಾಷ್ಟ್ರದಲ್ಲಿ ಯಾವ ರೀತಿ ಮಾಡುತ್ತಿದ್ದಾರೆಂದು ನೋಡಿದಾಗ, ಅವರು ಅಲ್ಲಿ ಬೋರ್ಡ್‌ಗಳನ್ನು ಮಾಡಿ ಈ ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಸಹ ಜಿಲ್ಲಾವಾರು ಹಂಚಿಕೆ ಮಾಡುವುದಕ್ಕೆ ಮಹಾರಾಷ್ಟ್ರದಲ್ಲಿ ಯಾವ ರೀತಿ ಬೋರ್ಡ್‌ಗಳನ್ನು ಮಾಡಿದ್ದಾರೋ ಅದೇ ರೀತಿಯ ಬೋರ್ಡ್‌ಗಳನ್ನು ರಚನೆ ಮಾಡುವುದಕ್ಕೆ ನಮ್ಮ ಇಲಾಖಾ ವತಿಯಿಂದ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ

ಸಲ್ಲಿಸಿದ್ದೇವೆ. ಆ ಪ್ರಸ್ತಾವನೆ ಈಗ ಸರ್ಕಾರದ ಮುಂದೆ ಇದೆ. ಬೋರ್ಡ್‌ಗಳು ರಚನೆ ಆದಮೇಲೆ ಬೋರ್ಡ್‌ಗಳ ಮೂಲಕವೇ ವೈದ್ಯಕೀಯ ಸೀಟುಗಳ ಹಂಚಿಕೆ ಆಗುತ್ತದೆ. ಈಗ ನಾವು ಏನು ಮಾಡುತ್ತಿದ್ದೇವೆ ಅಂದರೆ, ಸಿ.ಇ.ಟಿ. ಎಂದು ಮಾಡಿ ಅದರ ಮೂಲಕ ಶೇಕಡ 30 ಸೀಟುಗಳನ್ನು ಆಯಾಯ ಜಿಲ್ಲೆಯವರಿಗೆ ಹಂಚಿಕೆ ಮಾಡಬೇಕೆಂದು ಮಾಡಿದ್ದೇವೆ. ಇದರಿಂದ ಕನಿಷ್ಟಪಕ್ಷ ಎಲ್ಲಾ ಜಿಲ್ಲೆಗಳಿಗೂ ಶೇಕಡ 30ರಷ್ಟು ಸೀಟುಗಳು ಸಿಗುತ್ತವೆ. ತಾವು ಮಾತನಾಡುವಾಗ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಿಗೆ ಜಾಸ್ತಿ ಸೀಟುಗಳು ಸಿಕ್ಕಿವೆ ಎಂದು ಹೇಳಿದಿರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ನೋಡಿದರೆ ಅಂಕಿಅಂಶಗಳ ಪ್ರಕಾರ ಕಡಿಮೆ ಇದೆ. ನಗರ ಜಿಲ್ಲೆಯಲ್ಲಿ ಸ್ವಲ್ಪ ಜಾಸ್ತಿ ಇರಬಹುದು, ಹಿಂದೆ ಮಹಾರಾಷ್ಟ್ರದಲ್ಲಿ ಸಹ ಜಿಲ್ಲಾವಾರು ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಿದಾಗ ಅಲ್ಲಿ ಹೈಕೋರ್ಟ್‌ನವರು ಅದನ್ನು ಸ್ಟ್ರಕ್‌ಡೌನ್ ಮಾಡಿದ್ದಾರೆ. ಆದ್ದರಿಂದ ಆ ರೀತಿ ಮಾಡದೇ ಕರ್ನಾಟಕ ರಾಜ್ಯ ಸರ್ಕಾರ ಬೋರ್ಡ್‌ಗಳನ್ನು ರಚನೆ ಮಾಡಿ ಆ ಬೋರ್ಡ್‌ಗಳ ಮೂಲಕ ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಬೇಕೆನ್ನುವ ಪ್ರಸ್ತಾವ ಸರ್ಕಾರದ ಮುಂದೆ ಸಲ್ಲಿಸಿದೆ. ಅದು ಆದಮೇಲೆ ಆ ರೀತಿ ಮಾಡುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಈಗಾಗಲೇ ಎರಡು ವರ್ಷ ಆಯಿತು, ತಾವು ಭರವಸೆ ಕೊಟ್ಟು, ಆ ಭರವಸೆ ಇನ್ನೂ ಕಾರ್ಯಗತ ಆಗಲಿಲ್ಲ. ಇನ್ನೂ ಎಷ್ಟು ವರ್ಷ ಬೇಕು, ಅದಕ್ಕೆ ಸರ್ಕಾರ ಒಂದು ಟೈಮ್ ಬೌಂಡ್ ಪ್ರೋಗ್ರಾಂ ಹಾಕಿಕೊಂಡು ಕೆಲಸ ಮಾಡಬೇಕು.

ಡಾ|| ಎಂ.ಶಂಕರನಾಯಕ್: ನಾನು ಈ ಖಾತೆಯನ್ನು ವಹಿಸಿಕೊಂಡು ಒಂದೂವರೆ ವರ್ಷ ಆಯಿತು. ತಮಗೆ ಕೊಟ್ಟ ಭರವಸೆ ಕಾರ್ಯಗತ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಡಿ.ಆರ್.ಪಾಟೀಲ್: ನಮಗೆ ಭರವಸೆ ಬೇಡ. ಕ್ರಮ ತೆಗೆದುಕೊಳ್ಳಬೇಕು. ಎರಡು ಪರೀಕ್ಷೆಗಳು ಮುಗಿದಿದೆ. ಇನ್ನೂ ಪರಿಶೀಲನೆ ಮಾಡುತ್ತೇನೆಂದರೆ ಹೇಗೆ?

ಡಾ|| ಎಂ.ಶಂಕರ್‌ನಾಯಕ್: ಮಾನ್ಯ ಅಧ್ಯಕ್ಷರೇ, ಸಿ.ಇ.ಟಿ.ಯಲ್ಲಿ ನಾವು ಈಗಾಗಲೇ 30ರಷ್ಟು ಸೀಟುಗಳನ್ನು ಜಿಲ್ಲಾವಾರು ಮೀಸಲಿಟ್ಟಿದ್ದೇವೆ.

ಅಧ್ಯಕ್ಷರು: ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ.

ಡಾ|| ಎಂ.ಶಂಕರನಾಯಕ್: ಆಗಬಹುದು.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಹೇಳಲಿ. ಬೋರ್ಡ್‌ಗಳನ್ನು ರಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು. ನಾನು ಎರಡು

ವರ್ಷಗಳಿಂದ ಕೇಳುತ್ತಿದ್ದೇನೆ. ಈಗಾಗಲೇ ಎರಡು ಪರೀಕ್ಷೆಗಳು ಮುಗಿದು ಹೋಗಿದೆ. ಉತ್ತರ ಕರ್ನಾಟಕದ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಲಿ. ನಮಗೆ ಭರವಸೆ ಬೇಡ.

ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತ್‌ಗಳ ರಚನೆ

30 (157)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತ್‌ಗಳ ರಚನೆಯನ್ನು ಯಾವಾಗ ಮಾಡಲಾಗುವುದು

ಆ) 1998-99ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ಗಳು ಆಯಾ ಜಿಲ್ಲೆಯಲ್ಲಿಯೇ ಕಾರ್ಯಾಚರಣೆ ಪ್ರಾರಂಭ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?

ಇ) ಇದಕ್ಕಾಗಿ 1998-99ನೇ ಸಾಲಿನ ಬಜೆಟ್‌ನಲ್ಲಿ ಹಣ ಒದಗಿಸುವ ಯೋಜನೆ ಸರಕಾರದ ಮುಂದಿದೆಯೇ? ಮುಂದಿದ್ದಲ್ಲಿ ವಿವರ ನೀಡುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ದಿನಾಂಕ: 1-4-98 ರಿಂದ ರಚಿಸಲಾಗುವುದು.

ಆ) ಹೌದು.

ಇ) ಹೌದು.

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರೇ ಲಿಖಿತ ಉತ್ತರದ ಜೊತೆಗೆ ಮತ್ತೊಂದು ವಿಚಾರ ಹೇಳುವುದಾದರೆ ಈಗಾಗಲೇ ಹೊಸದಾಗಿ ಏಳು ಜಿಲ್ಲೆಗಳು ಅಸ್ತಿತ್ವಕ್ಕೆ ಬಂದಿವೆ. ಈ ಜಿಲ್ಲೆಗಳಿಗೆ ಡಿಸ್ಟ್ರಿಕ್ಟ್ ಸೆಕ್ರೆಟರಿ ಮತ್ತು ಅಸಿಸ್ಟೆಂಟ್ ಸ್ಪೆಷಲ್ ಆಫೀಸರ್‌ಗಳನ್ನು ನೇಮಕ ಮಾಡಲು ಏರ್ಪಾಡು ಮಾಡಿದ್ದೇವೆ. 1998-99ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ಗಳು ಆಯಾ ಜಿಲ್ಲೆಯಲ್ಲಿ ಕಾರ್ಯಚರಣೆ ಪ್ರಾರಂಭ ಮಾಡಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ಮತ್ತು 1998-99ನೇ ಸಾಲಿನ ಬಜೆಟ್‌ನಲ್ಲಿ ಹಣ ಒದಗಿಸಲಾಗುವುದು. ದಿನಾಂಕ 1-4-1998ರಿಂದ ಅಸ್ತಿತ್ವಕ್ಕೆ ಬರುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.